# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 632 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯ (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-275ರ) ಸಾರ್ವಜನಿಕ ಸಂಚಾರಕ್ಕೆ ಲೋಕಾರ್ಪಣೆಯಾದ ದಿನದಿಂದ ಇಲ್ಲಿಯವರೆಗೆ ಈ ಹೆದ್ದಾರಿಯಲ್ಲಿ ಸರಿಸುಮಾರು 900 ಅಪಘಾತ ಪ್ರಕರಣಗಳು ಸಂಭವಿಸಿ 100ಕ್ಕೂ ಹೆಚ್ಚು ಜನ ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಹೆದ್ದಾರಿ ಲೋಕಾರ್ಪಣೆಗೊಂಡ ಕೆಲವೇ ತಿಂಗಳುಗಳಲ್ಲಿ ಇಷ್ಟು ಪ್ರಮಾಣದ ಅಪಘಾತ ಪ್ರಕರಣಗಳು ಸಂಭವಿಸಲು ಕಾರಣಗಳೇನು; (ವಿವರ ನೀಡುವುದು) | ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-275ರ) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. ಸದರಿಯವರು ಈ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.<br><br>ರಾಷ್ಟ್ರೀಯ ಹೆದ್ದಾರಿ-275ರ ಎಕ್ಸ್‌ಪ್ರೆಸ್ ವೇ ಹೆದ್ದಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಹೆದ್ದಾರಿಯು ಉದ್ಘಾಟನೆಯಾದ ನಂತರದಲ್ಲಿ ಭಾಗದಲ್ಲಿ ಸಂಭವಿಸಿದ ಅಪಘಾತದ ವಿವರಗಳು ಈ ಕೆಳಕಂಡಂತಿದೆ. |

(i) ಪ್ಯಾಕೇಜ್ – I ಬೆಂಗಳೂರು ನಿಂದ ನಿಡಘಟ್ಟ ವಿಭಾಗ

| ಕ್ರ ಸಂ | ಮಾಹೆ | ಒಟ್ಟು ಅಪಘಾತಗಳು | ಮರಣ | ತೀವ್ರವಾಗಿ ಗಾಯ ಗೊಂಡವರು |
|---|---|---|---|---|
| 1 | ಮಾರ್ಚ್-23 | 38 | 13 | 43 |
| 2 | ಏಪ್ರಿಲ್-23 | 41 | 11 | 60 |
| 3 | ಮೇ-23 | 55 | 15 | 50 |
| 4 | ಜೂನ್-23 | 28 | 03 | 35 |
| | ಒಟ್ಟು | 162 | 42 | 188 |

(i) ಪ್ಯಾಕೇಜ್ – II ನಿಡಘಟ್ಟ ದಿಂದ ಮೈಸೂರು ವಿಭಾಗ

| ಕ್ರ ಸಂ | ಮಾಹೆ | ಒಟ್ಟು ಅಪಘಾತಗಳು | ಮರಣ | ತೀವ್ರವಾಗಿ ಗಾಯ ಗೊಂಡವರು |
|---|---|---|---|---|
| 1 | ಮಾರ್ಚ್-23 | 38 | 13 | 43 |
| 2 | ಏಪ್ರಿಲ್-23 | 41 | 11 | 60 |
| 3 | ಮೇ-23 | 55 | 15 | 50 |
| 4 | ಜೂನ್-23 | 30 | 07 | 35 |
| | ಒಟ್ಟು | 164 | 46 | 188 |
| | ಪ್ಯಾಕೇಜ್-1&2ರ ಒಟ್ಟು | 326 | 88 | 376 |

ಅಪಘಾತಗಳಿಗೆ ಲೇನ್ ಶಿಸ್ತಿನ ಕೊರತೆ ಮತ್ತು ನಿಗದಿತ ವೇಗದ ಮಿತಿ 100 Kmph ಮೀರುವ ವಾಹನಗಳು ಪ್ರಮುಖ ಕಾರಣಗಳಾಗಿರುತ್ತವೆ.

| | | |
|---|---|---|
| | | ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅಪಘಾತಗಳ ದೃಷ್ಟಿಯಿಂದ ಹೆಚ್ಚುವರಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.<br>1. ಹೆಚ್ಚುವರಿ ವೇಗ ಮಿತಿ ಸೈನ್ ಬೋರ್ಡ್‌ಗಳು<br>2. ಪ್ರತಿ ಪ್ರವೇಶ ನಿರ್ಗಮನ ಸ್ಥಳದಲ್ಲಿ PTZ ಕ್ಯಾಮೆರಾ ಸ್ಥಾಪನೆ.<br>3. ಲೇನ್ ಶಿಸ್ತು ಗುರುತುಗಳು ಮತ್ತು ಸೈನ್ ಬೋರ್ಡ್‌ಗಳು.<br>4. ಹೆದ್ದಾರಿಯಲ್ಲಿ ನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವುದು.<br>5. ಪ್ರವೇಶ ನಿರ್ಗಮನ ಸ್ಥಳಗಳ ಬಳಿ ಸರ್ವೀಸ್ ರಸ್ತೆಯಲ್ಲಿ ಸ್ಪೀಡ್ ಬ್ರೇಕರ್‌ಗಳು.<br>6. ಹೆದ್ದಾರಿಯುದ್ದಕ್ಕೂ 24X7 ಹೆದ್ದಾರಿ ಗಸ್ತು ಮತ್ತು ಅಂಬ್ಯುಲೆನ್ಸ್ ಸೌಲಭ್ಯ. |
| (ಆ) | ಈ ಹೆದ್ದಾರಿಯಲ್ಲಿ ಹೆಚ್ಚು ಅಪಘಾತ ಪ್ರಕರಣಗಳು ಸಂಭವಿಸಲು ಅವೈಜ್ಞಾನಿಕ ಮತ್ತು ಗುಣಮಟ್ಟವಲ್ಲದ ರಸ್ತೆ ಕಾಮಗಾರಿಗಳೇ ಕಾರಣವೆಂದು ಸಾರ್ವಜನಿಕರ ಅಭಿಪ್ರಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಹೆದ್ದಾರಿಯ ಗುಣಮಟ್ಟದ ಬಗ್ಗೆ ಪರಿಶೀಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ–275, ಬೆಂಗಳೂರು–ಮೈಸೂರು ಪ್ರವೇಶ ನಿಯಂತ್ರಿತ (Access Control) ಹೆದ್ದಾರಿಯ ನಿರ್ಮಾಣ ಕಾರ್ಯಗಳನ್ನು ಸ್ವತಂತ್ರ ಇಂಜಿನಿಯರ್ ಮೇಲ್ವಿಚಾರಣೆಯಲ್ಲಿ IRC ನಿರ್ದಿಷ್ಟತೆ ಮತ್ತು ರಿಯಾಯತಿ ಒಪ್ಪಂದದ ಪ್ರಕಾರ ಕೈಗೊಳ್ಳಲಾಗಿದೆ.<br>IRCಯ ಸುರಕ್ಷತಾ ಮಾರ್ಗಸೂಚಿಗಳ ಪ್ರಕಾರ ಅಗತ್ಯವಿರುವ ಅಗತ್ಯ ಸುರಕ್ಷತಾ ವಿನ್ಯಾಸದ ಸೈನ್ ಬೋರ್ಡ್‌ಗಳು ಮತ್ತು ಲೇನ್ ಮಾರ್ಕಿಂಗ್ ಅನ್ನು ಒದಗಿಸಲಾಗಿದೆ.<br>ರಿಯಾಯತಿ ಒಪ್ಪಂದ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಅಗತ್ಯ ಗುಣಮಟ್ಟ ನಿಯಂತ್ರಣ ಮತ್ತು ಗುಣಮಟ್ಟ ಪರೀಕ್ಷೆಯನ್ನು ನೇಮಿಸಿದ ಸ್ವತಂತ್ರ ಇಂಜಿನಿಯರ್ ಮೂಲಕ ನಡೆಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ:ಲೋಇ 142 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು